ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-560002.

ದೂರವಾಣಿ-080-22213530/22241325 ಫ್ಯಾಕ್ಸ್ : 080-22214379 ಇ-ಮೇಲ್ : kanbhavblr@gmail.com ವೆಬ್ ಸೈಟ್ : www.kannadasiri.in

ಡಿಕೆಸಿ:27011/4/2021 ದಿನಾಂಕ:26.03.2021

**ಕಚೇರಿ ಆದೇಶ**

ವಿಷಯ : 2020-21ನೇ ಸಾಲಿನ ವಿಶೇಷ ಘಟಕ ಯೋಜನೆಯಡಿ ಬರುವ ವಿವಿಧ ಕಾರ್ಯಕ್ರಮಗಳಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ :
1. ಸರ್ಕಾರದ ಆದೇಶ ಸಂಖ್ಯೆ: ಕಸಂವಾ 73 ಕಸಧ 2021, ದಿನಾಂಕ:10.03.2021.
2. ಸರ್ಕಾರದ ಸೇರ್ಪಡೆ ಆದೇಶ ಸಂಖ್ಯೆ ಕಸಂವಾ:73:ಕಸಧ:2021, ದಿನಾಂಕ:16.03.2021
3. ಸರ್ಕಾರದ ಆದೇಶ ಸಂಖ್ಯೆ:ಕಸಂವಾ 144 ಕಸಧ 2020, ಬೆಂಗಳೂರು ದಿನಾಂಕ:10.11.2020
4. ಸರ್ಕಾರದ ಆದೇಶ ಸಂಖ್ಯೆ: ಆಇ 18 ಟಿಎಆರ್ 2015, ದಿನಾಂಕ:01.07.2015.
5. ಸರ್ಕಾರದ ಸೇರ್ಪಡೆ ಆದೇಶ ಸಂಖ್ಯೆ: ಕಸಂವಾ 73 ಕಸಧ 2021, ದಿನಾಂಕ:24.03.2021.

*******

**ಪ್ರಸ್ತಾವನೆ:**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(5)ರ ಆದೇಶದಲ್ಲಿ 2020-21ನೇ ಸಾಲಿನ ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆಯಡಿ ಸಾಂಸ್ಕೃತಿಕ ಸಂಘ ಸಂಸ್ಥೆಗಳ ಚಟುವಟಿಕೆಗಳಿಗೆ ಸರ್ಕಾರದ ಆದೇಶ ಸಂಖ್ಯೆ:ಕಸಂವಾ 144 ಕಸಧ 2020, ಬೆಂಗಳೂರು ದಿನಾಂಕ:10.11.2020ರ ಮಾರ್ಗಸೂಚಿಯ ಷರತ್ತಿಗೊಳಪಟ್ಟು ಹಾಗೂ ವಿಶೇಷ ಘಟಕ ಯೋಜನೆಯ ಲೆಕ್ಕ ಶೀರ್ಷಿಕೆಯ ಅನುದಾನ ಲಭ್ಯತೆ ಹಾಗೂ ಸೇವಾ ಸಿಂಧು ಮುಖೇನ ಸ್ವೀಕೃತಗೊಂಡಿರುವ ಅರ್ಜಿಗಳಲ್ಲಿ ಯಾವುದೇ ಪುನರಾವರ್ತನೆಯಾಗದಿರುವ ಷರತ್ತಿಗೊಳಪಟ್ಟು ವಿಶೇಷ ಘಟಕ ಯೋಜನೆಯಡಿ ಬರುವ 47 ಸಂಘ ಸಂಸ್ಥೆಗಳಿಗೆ ಅನುಬಂಧದಲ್ಲಿ ವಿವರಿಸಿರುವಂತೆ ಅನುದಾನ ಬಿಡುಗಡೆಮಾಡಿ ಆದೇಶಿಸಿರುತ್ತದೆ.

ಸರ್ಕಾರದ ಆದೇಶದಂತೆ ಸಂಘ ಸಂಸ್ಥೆಗಳಿಂದ ಅಗತ್ಯ ದಾಖಲಾತಿಗಳನ್ನು ಪಡೆಯಬೇಕಾಗಿದ್ದು, ಸದರಿ ಪ್ರಕ್ರಿಯೆಯು ವಿಳಂಬವಾಗುವುದರಿಂದ ಸರ್ಕಾರದ ಆದೇಶದಂತೆ ಬಿಡುಗಡೆ ಮಾಡಲು ಅನುಕೂಲವಾಗುವಂತೆ ಮತ್ತು ಕ್ರಿಯಾ ಯೋಜನೆಯಲ್ಲಿರುವ ಕಾರ್ಯಕ್ರಮಗಳನ್ನು ಕೋವಿಡ್-19 ಹಿನ್ನೆಲೆಯಲ್ಲಿ ಅನುಷ್ಠಾನಗೊಳಿಸಲು ವಿಳಂಭವಾಗಿರುವುದರಿಂದ ಕಾರ್ಯಕ್ರಮಗಳ ವೆಚ್ಚ ಭರಿಸಲು ಅನುದಾನದ ಅವಶ್ಯಕತೆ ಇರುತ್ತದೆ. ಈ ಹಿನ್ನೆಲೆಯಲ್ಲಿ ಖಜಾನೆ ಬಿಲ್ಲುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಅಂತ್ಯದಲ್ಲಿರುವುದರಿಂದ ರಿಜಿಸ್ಟ್ರಾರ್, ಕರ್ನಾಟಕ ಜಾನಪದ ಅಕಾಡೆಮಿಗೆ ಒಟ್ಟು ರೂ.40.00 ಲಕ್ಷ ಅನುದಾನವನ್ನು ಬಿಡುಗಡೆಮಾಡಲು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

**ಆದೇಶ:**

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ವಿಶೇಷ ಘಟಕ ಯೋಜನೆಯಡಿ ರಿಜಿಸ್ಟ್ರಾರ್, **ಕರ್ನಾಟಕ ಜಾನಪದ ಅಕಾಡೆಮಿಗೆ (Recipient ID-1000193025)** ಒಟ್ಟು ರೂ.40.00 ಲಕ್ಷ (ರೂಪಾಯಿ ನಲವತ್ತು ಲಕ್ಷ ಮಾತ್ರ)ಗಳನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ಬಿಡುಗಡೆ ಮಾಡಿ ಆದೇಶಿಸಿದೆ. ಸದರಿ ಅನುದಾನವನ್ನು ಖಜಾನೆ-2ರ ಮೂಲಕ ಅನುದಾನದ ಬಿಲ್ಲಿನ ಮೇಲೆ ಡ್ರಾ ಮಾಡಿ ಪಾವತಿಸಲು ಆದೇಶಿಸಿದೆ.

**ಷರತ್ತುಗಳು:**

4. ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಹಣ ಮಂಜೂರು ಮಾಡಿದ್ದು, ಅದೇ ಉದ್ದೇಶಕ್ಕೆ ಬಳಸತಕ್ಕದ್ದು.
5. ಮಂಜೂರು ಮಾಡಿದ ಹಣ ಸಮರ್ಪಕವಾಗಿ ಬಳಕೆಯಾದ ಬಗ್ಗೆ ಲೆಕ್ಕಪರಿಶೋಧಕರಿಂದ ದೃಢೀಕರಿಸಿದ ಲೆಕ್ಕಪಟ್ಟಿ ಹಾಗೂ ಹಣಬಳಕೆ ಪ್ರಮಾಣ ಪತ್ರವನ್ನು ಪಡೆದು ಸಲ್ಲಿಸುವುದು
6. ಬಿಡುಗಡೆ ಮಾಡಿದ ಅನುದಾನಕ್ಕೆ ಸಂಬಂಧಿಸಿದಂತೆ ಕೇಂದ್ರ ಕಚೇರಿಯ ನಿರ್ದೇಶನದಂತೆ ಕ್ರಮವಹಿಸುವುದು.

ಈ ವೆಚ್ಚವನ್ನು 2020-21ನೇ ಸಾಲಿನ ಕ್ರಿಯಾ ಯೋಜನೆಯ ಲೆಕ್ಕಶೀರ್ಷಿಕೆ:2205-00-102-1-44-422ರಡಿ ಭರಿಸತಕ್ಕದ್ದು.

26/3

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
ಬೆಂಗಳೂರು

ಪ್ರತಿಯನ್ನು:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಕಾಸಸೌಧ, ಬೆಂಗಳೂರು ಇವರ ಅವಗಾಹನೆಗಾಗಿ.
3. ಜಂಟಿ ನಿರ್ದೇಶಕರು (ಆ) (ಕಾ)(ಸು.ಕ) (ಸಾ) ಕೇಂದ್ರ ಕಚೇರಿ ಇವರ ಮಾಹಿತಿಗಾಗಿ.
4. ರಿಜಿಸ್ಟ್ರಾರ್, ಕರ್ನಾಟಕ ಜಾನಪದ ಅಕಾಡೆಮಿ, ಕನ್ನಡ ಭವನ, ಬೆಂಗಳೂರು.
5. ಲೆಕ್ಕಪತ್ರಾಧಿಕಾರಿಗಳು, ಕೇಂದ್ರ ಕಚೇರಿ, ಬೆಂಗಳೂರು.
6. ಜಂಟಿ ನಿರ್ದೇಶಕರು, ರಾಜ್ಯಹುಜೂರ್ ಖಜಾನೆ, ಕೇಂದ್ರ ಕಚೇರಿ, ಬೆಂಗಳೂರು.
7. ವಿಷಯ ನಿರ್ವಾಹಕರು, ಎನ್.ಎಂ.ಸಿ. ವಿಭಾಗ, ಕೇಂದ್ರ ಕಚೇರಿ, ಬೆಂಗಳೂರು.
8. ವಿಷಯ ನಿರ್ವಾಹಕರು, ಲೆಕ್ಕಪತ್ರ ಶಾಖೆ, ಕೇಂದ್ರ ಕಚೇರಿ, ಬೆಂಗಳೂರು.
9. ಕಡತಕ್ಕೆ.